



ಬಂದಿರುತ್ತಾರೆ...ಅವರು ಅದೆಷ್ಟು ಗಂಟೆಗಳಿಂದ ಕಾಯುತ್ತಿದ್ದಾರೋ...ಅವರ ಆಯಾಸದ ಎದುರು ನನ್ನ ಆಯಾಸ ಏನೇನೂ ಅಲ್ಲ, ಮಹಾದೇವ.' ಬಾಪೂ ಮೆಲ್ಲನೆ ನಕ್ಕು ಹೇಳಿದರು.

ರೈಲು ಪ್ಲಾಟ್‌ಫಾರ್ಮ್ ತಲುಪಿದಾಗ, ನೂರಾರು ಜನ ಬಾಪೂ ಅವರಿದ್ದ ಬೋಗಿಗೆ ಬಂದು ಎರಡೂ ಕಡೆಗಳಿಂದ ಸುತ್ತುವರೆದರು. 'ಮಹಾತ್ಮಾ ಗಾಂಧಿ ಕೀ ಜಯ್' ಘೋಷಣೆಗಳು ಮತ್ತೊಮ್ಮೆ ಮುಗಿಲು ಮುಟ್ಟಿತು. ಬಾಪೂ ಅವರನ್ನು ನೋಡಲು ಜನ ಕಿಡಕಿಯಿಂದ ಒಳಗೆ ನುಗ್ಗಿ ಬರುತ್ತಿದ್ದರು. ಹೂಗಳ ಮಳೆಗರೆಯಲಾಯಿತು.

ಬಾಪೂ ಮೆಲ್ಲನೆ ಎದ್ದು ನಿಂತರು. ಮಹಾದೇವ ದೇಸಾಯಿಯವರ ಹೆಗಲಿನ ಆಸರೆಯಲ್ಲಿ ಬಾಪೂ ಅವರು ಬಾಗಿಲ ಸಮೀಪಕ್ಕೆ ಬಂದರು. ಗುಂಪನ್ನು ನಿಯಂತ್ರಿಸುವುದು ಕಷ್ಟವಾಯಿತು. ಗಡಿಬಿಡಿ, ಅವಾಂತರ ಹಬ್ಬಿತು. ಸುತ್ತಮುತ್ತಲಿದ್ದ ಜನ ಗಂಟಲು ಹರಿಯುವಂತೆ ಘೋಷಣೆಗಳನ್ನು ಹಾಕುತ್ತಿದ್ದರು. ಬಾಪೂ ಕೈಮುಗಿದರು. ಜನ ಅವರ ಕೊರಳಿಗೆ ಬೀಳುವಂತೆ ಹೂಮಾಲೆಗಳನ್ನು ಎಸೆದರು. ಬಾಪೂ ಅವರು ಆ ಮಾಲೆಗಳನ್ನು ಸಮೀಪದಲ್ಲಿ ನಿಂತಿದ್ದ ಮಕ್ಕಳ ಕೊರಳಿಗೆ ಹಾಕಿದರು. ನಂತರ ಮೆಲ್ಲಮೆಲ್ಲನೆ ತಮ್ಮ ಜಾಗಕ್ಕೆ ಬಂದರು. ಬೆಂಚಿನ ಮೇಲೆ ಹಾಸಿದ್ದ ತೆಳು ಹಾಸಿಗೆಯಲ್ಲಿದ್ದ ದಿಂಬಿಗೆ ಆತುಕೊಂಡು ತಮ್ಮ ಶರೀರವನ್ನು ಹಗುರ ಬಿಟ್ಟರು. ಹೊರಗಿನಿಂದ, ಬೋಗಿಯ ಕಿಡಕಿಬಾಗಿಲುಗಳಿಂದ ಬರುತ್ತಿದ್ದ ಗದ್ದಲ ಇನ್ನೂ ನಿಂತಿರಲಿಲ್ಲ. ಮಹಾದೇವ ದೇಸಾಯಿಯವರು ಈಗಲೂ ಸಲಾಖೆಗಳನ್ನು ಹಿಡಿದು ಬಾಗಿಲ ಬಳಿಯೇ ನಿಂತಿದ್ದರು. ಆಗಲೇ ಅಕಸ್ಮಾತ್ ಈ ಎಲ್ಲಾ ಧ್ವನಿಗಳಿಗಿಂತ ಪ್ರತ್ಯೇಕವಾಗಿದ್ದ ಧ್ವನಿಯೊಂದು, ಎಲ್ಲಾ ಜಯಕಾರಗಳನ್ನು ಮೀರಿ ಬೋಗಿಯಲ್ಲಿ ದಾಖಲಾಯಿತು 'ಮಾತೆ ಕಸ್ತೂರಬಾ ಅವರಿಗೆ ಜಯವಾಗಲಿ...!'

ಧ್ವನಿ ಕ್ಷೀಣವಾಗಿತ್ತು. ಬೇರೆ ಗದ್ದಲಗಳಲ್ಲಿ ಕಳೆದೂ ಹೋಗುವಂತಿತ್ತು, ಆದರೆ ನಿರಪೇಕ್ಷ ಭಾವನೆಯಿಂದ ಎಲ್ಲವನ್ನೂ ನೋಡುತ್ತಿದ್ದ ಬಾ ಅವರ ಕಣ್ಣುಗಳು ಇದ್ದಕ್ಕಿದ್ದಂತೆ ಹೊಳೆದವು. ಅವರ ಕಿವಿಗಳು ನಿಮಿರಿದವು. ಮುಖದಲ್ಲಿ ಅವರ್ಣನೀಯ ಭಾವನೆ ಮೂಡಿತು. ಮತ್ತೊಮ್ಮೆ ಅವರು ಆ ಧ್ವನಿಯನ್ನು ಸ್ಪಷ್ಟವಾಗಿ ಕೇಳಿದರು 'ಮಾತೆ ಕಸ್ತೂರಬಾ ಅವರಿಗೆ ಜಯವಾಗಲಿ...!'

ಬಾ ಅವರು ಕಕ್ಕಾಬಿಕ್ಕಿಯಾಗಿ ಎದ್ದು ನಿಂತು ಬಾಪೂ ಅವರನ್ನು ನೋಡಿದರು. ಬಾಪೂ ಅವರ ಕಣ್ಣುಗಳು ಸಹ ಹೊಳೆಯುತ್ತಿದ್ದವು. ಅವರೂ ಸಹ ಈಗ ಆ ಧ್ವನಿಯನ್ನು ತದೇಕಚಿತ್ತದಿಂದ ಕೇಳಿದರು' ಮಾತೆ ಕಸ್ತೂರಬಾ ಅವರಿಗೆ ಜಯವಾಗಲಿ...!

'ಇದು ಹರಿಲಾಲನ ಧ್ವನಿ!' ಬಾ ಅವರಿಂದ ಮುಂದಕ್ಕೆ ಮಾತೇ ಹೊರಡಲಿಲ್ಲ. ಕಳೆದ ಅನೇಕ ದಿನಗಳಿಂದ ಹರಿಲಾಲನ ಬಗ್ಗೆ ಯಾವುದೇ ಸಮಾಚಾರ ಲಭಿಸಿರಲಿಲ್ಲ. ಸಣ್ಣಪುಟ್ಟ ಸುದ್ದಿಗಳನ್ನು ಹೊರತು ಪಡಿಸಿ ಅವನಿರುವ ಸ್ಥಳ, ಊರು ಅಥವಾ ಉದ್ಯೋಗದ ಬಗ್ಗೆ ಬಾ ಅವರಿಗೆ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ.

'ಹೌದು, ಹರಿಲಾಲನದೇ ಧ್ವನಿ' ಬಾಪೂ ಬಾ ಅವರ ಮಾತನ್ನು ಸಮರ್ಥಿಸಿದರು.

ಈ ನಡುವೆ ಬಾ ಅವರು ಹೇಗೋ ಮಾಡಿ ಕಿಡಕಿಯ ಸಮೀಪಕ್ಕೆ ಬಂದಿದ್ದರು. ಜನರನ್ನು ತಳ್ಳುತ್ತಾ, ಗುಂಪನ್ನು ಸೀಳುತ್ತಾ, ಎಲ್ಲರಿಂದ ತಳ್ಳಿಸಿಕೊಳ್ಳುತ್ತಾ, ತಡಬಡಿಸುತ್ತಾ, ತನ್ನನ್ನು ಸಂಭಾಳಿಸಿಕೊಳ್ಳುತ್ತಾ ಹರಿಲಾಲ ಏಳುತ್ತಾ ಬೀಳುತ್ತಾ ಕಿಡಕಿಯ ಸಮೀಪಕ್ಕೆ ಬರುತ್ತಿದ್ದ. ಇದನ್ನು ನೋಡಿ ಬಾ ಅವರು ತಮ್ಮ ಕಣ್ಣುಗಳನ್ನು ನಂಬದಾದರು. ಅದೆಷ್ಟೋ ದಿನಗಳ ನಂತರ ಅವರು ಮಗನನ್ನು ನೋಡುತ್ತಿದ್ದರು, ಅವರ ಕಣ್ಣುಗಳು ತುಂಬಿ ಬಂದವು. ತುಟಿಗಳು ಕಂಪಿಸಿದವು. ಮುಖದಲ್ಲಿ ಅಪಾರ ವ್ಯಥೆ ಕವಿಯಿತು. ಹರಿಲಾಲ ತುಂಬಾ ಸೊರಗಿದ್ದ. ಅವನ ಮುಂದಿನ ಹಲ್ಲುಗಳು ಬಿದ್ದು ಹೋಗಿದ್ದವು. ಬಟ್ಟೆಗಳು ಕೊಳಕು ಮಾತ್ರವಲ್ಲ, ಅಲ್ಲಲ್ಲಿ ಹರಿದೂ ಹೋಗಿದ್ದವು. ಹರಿಲಾಲ ಮೊಣಕಾಲುಗಳವರೆಗೆ ಚಿಕ್ಕ ಪಂಚೆ ಮತ್ತು ಅರ್ಧ ತೋಳಿನ ಅಂಗಿಯನ್ನು ಧರಿಸಿದ್ದ. ಕಾಲುಗಳಲ್ಲಿ ಚಪ್ಪಲಿಗಳಿರಲಿಲ್ಲ. ಕೈಯಲ್ಲಿ ಒಂದು ಸಣ್ಣ ಚೀಲವಿತ್ತು. ತಲೆಕೂದಲುಗಳು ಒಣಗಿ, ಕೆದರಿದ್ದವು. ಅದೆಷ್ಟೋ ದಿನಗಳಿಂದ ಅವನು ತಲೆಯನ್ನು ಬಾಚಿಕೊಂಡಿರಲಿಲ್ಲ. ಮುಖ ಧೂಳಿನಿಂದಾವರಿಸಿತ್ತು. ಕಣ್ಣುಗಳು ಒಳಗೆ ಕುಸಿದಿದ್ದವು. ಕಸ್ತೂರಬಾ ಅವರನ್ನು ನೋಡಿದೊಡನೆಯೇ ಹರಿಲಾಲ ನಕ್ಕು ಗಟ್ಟಿಯಾಗಿ ಹೇಳಿದ'ಮಾತೆ ಕಸ್ತೂರಬಾ ಅವರಿಗೆ ಜಯವಾಗಲಿ.'

ಬಾ ಅವರು ಮಾತನಾಡುವುದಕ್ಕೂ ಮೊದಲೇ ಹಾಗೂ ಆಕಸ್ಮಿಕ ಪ್ರಸಂಗದಿಂದ ಉದ್ಭವಿಸಿದ ಆವೇಗದಿಂದ ಮುಕ್ತವಾಗುವುದಕ್ಕೂ ಮೊದಲೇ ಹರಿಲಾಲನ ತನ್ನ ಅಂಗಿಯ ಜೇಬಿನಿಂದ ಮೋಸುಂಬೆಯೊಂದನ್ನು ಹೊರ ತೆಗೆದು ಬಾ ಅವರೆದುರು ಹಿಡಿದ.

'ಅಮ್ಮಾ...ಅಮ್ಮಾ...ಈ ಮೋಸುಂಬೆಯನ್ನು ತೆಗೆದುಕೋ, ನಾನು ನಿನಗಾಗಿ ತಂದಿದ್ದೇನೆ.' ಹರಿಲಾಲ ಕಂಪಿಸುವ ಕೈಗಳಿಂದ ಬಾ ಅವರ ಕೈಯಲ್ಲಿ ಮೋಸುಂಬೆಯನ್ನಿಟ್ಟ.

'ಹರಿ...ಹರಿ...' ಬಾ ಅವರಿಂದ ಮಾತೇ ಹೊರಡುತ್ತಿರಲಿಲ್ಲ, 'ಇದೇನು ನಿನ್ನ ಪರಿಸ್ಥಿತಿ...? ನೀನು...ನೀನು...ನನಗೆ ಈ ಮೋಸುಂಬೆಯನ್ನು ತಂದಿದ್ದೀಯ, ಹರಿ?' ಬಾ ಅವರು ತಮ್ಮ ಮಾತನ್ನು ಹೇಗೋ ಪೂರೈಸಿದರು.

'ಹೌದಮ್ಮ ಹೌದು...ವಿಶೇಷವಾಗಿ ನಿನಗೋಸ್ಕರ ತಂದಿದ್ದೇನೆ' ಹರಿಲಾಲ ಉತ್ಸಾಹದಿಂದ ಹೇಳಿದ. ಈ ನಡುವೆ ಬಾಪೂ ಅವರು ತಮ್ಮ ಜಾಗದಿಂದೆದ್ದು ಕಿಡಕಿಯ ಸಮೀಪಕ್ಕೆ ಬಂದಿದ್ದರು. ಅವರು ಹರಿಲಾಲನನ್ನು ನೋಡಿದರು. ಹರಿಲಾಲನೂ ಬಾಪೂ ಅವರನ್ನು ನೋಡಿದ. ಬಾಪೂ ಅವರು ತಲೆಯನ್ನು ಹೊರ ಹಾಕಿ ಕೇಳಿದರು, 'ಹರಿ, ನನಗೇನೂ ತರಲಿಲ್ಲವೇ?'

'ನಿಮಗೆ?' ಹರಿಲಾಲನೂ ಪ್ರಶ್ನಿಸಿದ, 'ಇಲ್ಲ, ಇದನ್ನು ನಾನು ಅಮ್ಮನಿಗಾಗಿ ತಂದಿದ್ದೇನೆ. ನೀವಿಂದು ಈ ಅಮ್ಮ ಬಾ ಅವರ ಪ್ರತಾಪದಿಂದಲೇ ಇಷ್ಟು ದೊಡ್ಡ ವ್ಯಕ್ತಿಗಳಾಗಿದ್ದೀರ ಎಂದಷ್ಟೇ ನಾನು ನಿಮಗೆ ಹೇಳುತ್ತೇನೆ.'

'ಇದರಲ್ಲಿ ಯಾವ ಅನುಮಾನವೂ ಇಲ್ಲ, ಹರಿ. ಆದರೆ ನೀನು ನಮ್ಮೊಂದಿಗೆ ಬರುವೆಯಾ?'

'ಈ ಮೋಸುಂಬೆಯನ್ನು ಎಲ್ಲಿಂದ ತಂದೆ, ಹರಿ?' ಬಾ ಅವರು ಮೋಸುಂಬೆಯನ್ನು ನೇವರಿಸುತ್ತಾ ಕೇಳಿದರು.

'ಭಿಕ್ಷೆ ಬೇಡಿಯಾದರೂ ತಂದಿರಬಹುದು, ಆದರೆ ನಿನಗಾಗಿ ಪ್ರೀತಿಯಿಂದ ತಂದಿದ್ದೇನೆ, ಅಮ್ಮಾ!'

ಬಾ ಅವರು ಮೋಸುಂಬೆಯನ್ನು ಒಂದು ಕೈಯಲ್ಲಿ ಹಿಡಿದು, ಇನ್ನೊಂದು ಕೈಯಿಂದ ಕಿಡಲಿಯ ಬಳಿ ತಲೆ ತಗ್ಗಿಸಿ ನಿಂತಿದ್ದ ಮಗನ ಕೆದರಿದ ಮತ್ತು ಕೊಳಕಾದ ತಲೆಯನ್ನು ಪ್ರೀತಿಯಿಂದ ನೇವರಿಸಿದರು. ಅವರ ತುಟಿಗಳು ಮತ್ತೊಮ್ಮೆ ಕಂಪಿಸಿದವು.

'ಅಮ್ಮಾ, ಈ ಮೋಸುಂಬೆಯನ್ನು ನೀನೇ ತಿನ್ನಬೇಕು' ಹರಿಲಾಲ ಅಕಸ್ಮಾತ್ ತಲೆಯೆತ್ತಿ ಸ್ವಲ್ಪ ಒರಟಾಗಿ ಹೇಳಿದ, 'ಒಂದು ವೇಳೆ ನೀನು ತಿನ್ನದಿದ್ದರೆ, ನನಗೆ ಮರಳಿ ಕೊಡು.'

'ಹರಿ, ಈ ಮೋಸುಂಬೆಯನ್ನು ನಾನೇ ತಿನ್ನುತ್ತೇನೆ...' ತಾಯಿ ಎವೆಯಿಕ್ಕದೆ ಮಗನನ್ನೇ ನೋಡುತ್ತಿದ್ದಳು, ನಂತರ ತಡಬಡಿಸುವ ಧ್ವನಿಯಲ್ಲಿ ಹೇಳಿದರು, 'ಸ್ವಲ್ಪ ನಿನ್ನ ಅವಸ್ಥೆಯನ್ನು ನೋಡಿಕೋ, ಹರಿ. ನೀನು ಯಾರ ಮಗನೆಂಬ ಬಗ್ಗೆಯಾದರೂ ಸ್ವಲ್ಪ ಯೋಚಿಸು. ನಡಿ...ನಡಿ...ನಮ್ಮ ಜೊತೆಗೆ ಬಾ...'

'ನಿಮ್ಮ ಜೊತೆಗೆ?' ಹರಿಲಾಲ ಬಾಪೂ ಅವರನ್ನು ನೋಡುತ್ತಾ ಮತ್ತೆ ಹೇಳಿದ, 'ಅಮ್ಮಾ, ಇನ್ನು ಈ ಬಗ್ಗೆ ಹೇಳಲೇ ಬೇಡ. ಈ ಪರಿಸ್ಥಿತಿಯಲ್ಲಿ ಯಾರೂ ಸಹ ನನ್ನನ್ನು ಪಾರು ಮಾಡಲು ಸಾಧ್ಯವಿಲ್ಲ.'

ಬಾ ಅವರ ರೋದನ ಹೊರ ಹೊಮ್ಮಿತು. ಕಣ್ಣುಗಳಲ್ಲಿ ಕಣ್ಣೀರು ಧಾರಾಕಾರವಾಗಿ ಹರಿಯಿತು. ಅವರು ಬೋಗಿಯ ಸೀಟು ಹಿಡಿದು ಅಲ್ಲಿಯೇ ಕುಸಿದು ಕೂತರು. ಆಗಲೇ ಅಕಸ್ಮಾತ್ ಗಾರ್ಡ್ ಸಿಳ್ಳು ಹಾಕಿದ. ಪ್ಲಾಟ್‌ಫಾರ್ಮ್‌ನ ಗಂಟೆ ಹೊಡೆಯಿತು. ರೈಲು ಮೆಲ್ಲನೆ ಸರಿಯಿತು. ಜನರ ಗುಂಪು ಹಿಂದುಳಿಯುತ್ತಿತ್ತು. ಮತ್ತೊಮ್ಮೆ 'ಮಹಾತ್ಮಾ ಗಾಂಧಿ ಕೀ ಜಯ್' ಘೋಷಣೆಗಳು ಮೊಳಗಿದವು. ಹರಿಲಾಲ ಸಹ ಆತುರದಿಂದ ರೈಲಿನೊಂದಿಗೆ ಓಡಿದ, ನಂತರ ಸಡಿಲಾಗಿ ಕೂತ ಬಾ ಅವರನ್ನು ಕತ್ತು ಹೊರಳಿಸಿ ನೋಡುತ್ತಾ ಹೇಳಿದ, 'ಅಮ್ಮಾ, ಈ ಮೋಸುಂಬೆಯನ್ನು ನೀನೇ ತಿನ್ನು.'

ಬಾ ಅವರು ತಲೆಯೆತ್ತಿ ನೋಡಿದರು. ತುಂಬಿ ಬಂದಿದ್ದ ಕಣ್ಣುಗಳೆದುರು ಮಗನ ಬಾಡಿದ ಮುಖ ಒಂದು ಕ್ಷಣ ಮಾತ್ರ ಕಂಡಿತು, ನಂತರ ಮರೆಯಾಯಿತು. ರೈಲಿನ ವೇಗ ಹೆಚ್ಚಿತು. ಅದು ಪ್ಲಾಟ್‌ಫಾರ್ಮ್‌ನ್ನು ಬಿಟ್ಟಿತ್ತು. ಆಗಲೇ ಬಾ ಅವರಿಗೆ ಅಕಸ್ಮಾತ್ ಏನೋ ನೆನಪಾಯಿತು, 'ಹರಿ... ಹರಿ...ನಾನು ನಿನಗೇನೂ ಕೊಡಲೇ ಇಲ್ಲವಲ್ಲ... ನೀನೇನು ತಿಂದಿದ್ದೀಯ ಎಂದೂ ಕೇಳಲಿಲ್ಲವಲ್ಲ...

ಹರಿ...ಹರಿ...ಮಗನೇ...ನೀನು ಹಸಿದಿರಬೇಕು...